# ‘ಶ್ರೀರಾಮಕೃಷ್ಣ ವಚನವೇದ’
# ಭಾವಧಾರೆ - 24

**ಸ್ವಾಮಿ ನಿತ್ಯಸ್ಥಾನಂದ**

ಶ್ರೀರಾಮಕೃಷ್ಣರು ಈಗ ಒಬ್ಬ ಭಕ್ತನನ್ನು, ‘‘ನಿನಗೆ ಸ್ವಪ್ನ ಬೀಳುತ್ತದೆಯೆ’’? ಎಂದು ಕೇಳಿದರು.

### ಆಧ್ಯಾತ್ಮಿಕ ಸ್ವಪ್ನ

**ಭಕ್ತ :** ‘‘ಹೌದು, ಅಂದು ಒಂದು ವಿಚಿತ್ರ ಸ್ವಪ್ನ ಕಂಡೆ. ಈ ಜಗತ್ತು ಯಾವ ಕಡೆಗೆ ನೋಡಿದರೂ ನೀರೇ ನೀರಾಗಿ ಅನಂತ ಜಲರಾಶಿಯಾಗಿ ಕಂಡಿತು. ಕೆಲವು ದೋಣಿಗಳು ತೇಲಾಡುತ್ತಿದ್ದವು. ಇದ್ದಕ್ಕಿದ್ದ ಹಾಗೆ ಅಲೆಗಳು ಬಂದು ಅವನ್ನು ಮುಳುಗಿಸಿಬಿಟ್ಟವು. ನಾನೂ ಇನ್ನೂ ಕೆಲವರು ಒಂದು ಜಹಜಿನಲ್ಲಿ ಇದ್ದೆವು. ಒಬ್ಬ ಬ್ರಾಹ್ಮಣರು ಆ ವಿಶಾಲವಾದ ಜಲರಾಶಿಯ ಮೇಲೆ ಸುಮ್ಮನೆ ನಡೆದು ಹೋಗುತ್ತಿರುವುದು ಕಣ್ಣಿಗೆ ಬಿತ್ತು. ನಾನು ಅವರನ್ನು ಕೇಳಿದೆ, ‘ತಾವು ನೀರಿನ ಮೇಲೆ ನಡೆದುಹೋಗುತ್ತಿದ್ದೀರಲ್ಲ, ಅದು ಹೇಗೆ?’ ಆ ಬ್ರಾಹ್ಮಣ ಸ್ವಲ್ಪ ನಕ್ಕು ಹೇಳಿದರು: ‘ಕಷ್ಟವೇನಿಲ್ಲ; ನೀರಿನ ಕೆಳಗೆ ಸೇತುವೆ ಇದೆ’ ಮತ್ತೆ ಕೇಳಿದೆ: ‘ತಾವು ಎಲ್ಲಿಗೆ ಹೋಗುತ್ತಿದ್ದೀರಿ?’ ಅವರು ಉತ್ತರ ಕೊಟ್ಟರು: ‘ಭವಾನೀಪುರಕ್ಕೆ’ ನಾನು ಬೇಡಿಕೊಂಡೆ: ‘ಹಾಗಾದರೆ ಸ್ವಲ್ಪ ತಾಳಿ ನಾನೂ ನಿಮ್ಮೊಡನೆ ಬರುತ್ತೇನೆ.’ ’’

**ಶ್ರೀರಾಮಕೃಷ್ಣರು:** ‘‘ಇದನ್ನು ಕೇಳಿ ನನಗೆ ರೋಮಾಂಚವಾಗುತ್ತಿದೆ.’’

**ಭಕ್ತ :** ‘‘ಆ ಬ್ರಾಹ್ಮಣರು ಹೇಳಿದರು: ‘ನಾನು ಬಹಳ ಆತುರದಲ್ಲಿದ್ದೇನೆ.’ ಅಲ್ಲಿಂದ ಇಳಿದು ಬರುವುದಕ್ಕೆ ನನಗೆ ಸಮಯ ಹಿಡಿಯುತ್ತದೆ. ನಾನು ಹೋಗಿಬರುತ್ತೇನೆ. ಈ ದಾರಿಯನ್ನು ನೋಡಿಕೊಂಡಿರು, ಆಮೇಲೆ ಬರುವೆಯಂತೆ.’’

**ಶ್ರೀರಾಮಕೃಷ್ಣರು:** ‘‘ರೋಮಾಂಚನವಾಗುತ್ತಿದೆ. ನೀನು ಬೇಗ ಮಂತ್ರೋಪದೇಶ ಪಡೆದುಕೊ.’’

ಈ ಮೇಲಿನ ಸ್ವಪ್ನ ತುಂಬ ವೈಶಿಷ್ಟ್ಯಪೂರ್ಣವಾಗಿದೆ, ತುಂಬ ಅರ್ಥಪೂರ್ಣವಾಗಿದೆ. ಜಲರಾಶಿಯು ಸಂಸಾರವನ್ನು ಸಂಕೇತಿಸುತ್ತದೆ. ದೋಣಿಗಳು ಮುಳುಗುವುದೆಂದರೆ ಅನೇಕರು ಈ ಸಂಸಾರದಲ್ಲಿ ಮುಳುಗಿಹೋಗುತ್ತಾರೆ. ಬ್ರಾಹ್ಮಣರು ನೀರಿನ ಮೇಲೆ ನಡೆದುಕೊಂಡು ಹೋಗುವುದೆಂದರೆ ಆಧ್ಯಾತ್ಮಿಕ ಸಾಧಕನು ಸಂಸಾರ ಸಾಗರವನ್ನು ದಾಟಿಹೋಗುವುದು. ನೀರಿನ ಕೆಳಗಿರುವ ಸೇತುವೆಯು ಭಗವಂತನ ಕೃಪೆಯನ್ನು ಸೂಚಿಸುತ್ತದೆ. ಭಗವಂತನ ಕಡೆಗೆ ಮುಂದುವರಿಯುತ್ತಿರುವಾಗ ಇತರರಿಗಾಗಿ ಕಾಯಲಾಗುವುದಿಲ್ಲ. ಪ್ರತಿಯೊಬ್ಬರೂ ತಮ್ಮ ಪ್ರಯತ್ನದಿಂದಲೇ ಮುಂದುವರಿಯಬೇಕು. ಗುರು ಕೇವಲ ದಾರಿ ತೋರಿಸುತ್ತಾನೆ, ನಡೆಯುವ ಕೆಲಸ ಸಾಧಕನದು. ಬಹುಶಃ ಈ ಕನಸಿನ ಅಂತರಾರ್ಥವನ್ನು ಭಾವಿಸುತ್ತ ಶ್ರೀರಾಮಕೃಷ್ಣರಿಗೆ ರೋಮಾಂಚನವಾಗಿರಬೇಕು.



*(ಸ್ವಾಮಿ ತದಾತ್ಮಾನಂದರ ಕಲಾಕೃತಿ)*

### ಶ್ರದ್ಧಾವಂತ ಮತ್ತು ತಾರ್ಕಿಕ ಮನಸ್ಸು

ನಾನಕ್ ಪಂಥದ ಕೆಲವು ಸಾಧುಗಳು ಕೊಠಡಿಗೆ ಬಂದು ‘‘ನಮೋ ನಾರಾಯಣ’’ ಎಂಬುದಾಗಿ ಪರಮಹಂಸರಿಗೆ ಅಭಿನಂದಿಸಿದರು.

**ಶ್ರೀರಾಮಕೃಷ್ಣರು:** ‘ಭಗವಂತನಿಗೆ ಯಾವುದೂ ಅಸಾಧ್ಯವಲ್ಲ. ಅವನ ಸ್ವರೂಪ ಏನೆಂಬುದನ್ನು ಯಾರಿಂದಲೂ ಬಾಯಿಯಿಂದ ವರ್ಣಿಸಲಾಗುವುದಿಲ್ಲ. ಭಗವಂತನ ಕೈಯಲ್ಲಿ ಎಲ್ಲವೂ ಸಾಧ್ಯ. ಒಂದು ಕಡೆ ಇಬ್ಬರು ಯೋಗಿಗಳು ಸಾಧನೆಯಲ್ಲಿ

ತೊಡಗಿದ್ದರು. ನಾರದ ಋಷಿ ಆ ಮಾರ್ಗವಾಗಿ ಒಂದು ದಿನ ಮುಂದುವರಿಯುತ್ತಿದ್ದರು. ಒಬ್ಬ ಯೋಗಿ ನಾರದರ ಪರಿಚಯ ಮಾಡಿಕೊಂಡು ಅವರನ್ನು ಕೇಳಿದ: 'ನೀವು ನಾರಾಯಣನ ಸಾನ್ನಿಧ್ಯದಿಂದ ಬರುತ್ತಿದ್ದೀರಲ್ಲವೆ? ಆತ ಏನು ಮಾಡುತ್ತಾ ಇದ್ದಾನೆ? ನಾರದರು ಹೇಳಿದರು: 'ಈಗ ತಾನೆ ನೋಡಿಕೊಂಡು ಬಂದೆ. ಆತ ಸೂಜಿಯ ಕಣ್ಣಿನ ಮೂಲಕ ಆನೆ ಮತ್ತು ಒಂಟೆಗಳನ್ನು ಈ ಕಡೆಯಿಂದ ಆ ಕಡೆಗೆ, ಆ ಕಡೆಯಿಂದ ಈ ಕಡೆಗೆ ಹುಗಿಸುತ್ತ ಇರುವುದನ್ನು'. ಅವರಲ್ಲಿ ಒಬ್ಬ ಹೇಳಿದ, 'ಅದರಲ್ಲಿ ಆಶ್ಚರ್ಯಪಡುವುದೇನಿದೆ? ಆತನಿಗೆ ಎಲ್ಲವೂ ಸಾಧ್ಯ.' ಆದರೆ ಇನ್ನೊಬ್ಬ ವಿಸ್ಮಯದಿಂದ ಹೇಳಿದ: 'ಏನು! ಅದು ಎಂದಿಗಾದರೂ ಸಾಧ್ಯವೆ? ನೀವು ಅಲ್ಲಿಗೆ ಹೋಗಲೇ ಇಲ್ಲ ಎಂದು ಕಾಣುತ್ತದೆ !''

ಮೊದಲನೆಯ ಯೋಗಿಯದು ಶ್ರದ್ಧಾವಂತ ಮನಸ್ಸು. ಅವನು ಎಲ್ಲ ಸಂಶಯಗಳನ್ನೂ ಮೀರಿ, ವಿಚಾರವನ್ನೂ ಮೀರಿ ಕೇವಲ ದೃಢಶ್ರದ್ಧೆಯಲ್ಲಿ ನೆಲೆನಿಂತಿದ್ದಾನೆ. ಭಗವತ್‌ಸತ್ಯವು ಎಲ್ಲ ವಿಚಾರವನ್ನೂ ಮೀರಿದುದು ಎಂಬುದು ಅವನಿಗೆ ಗೊತ್ತಿದೆ. ಆದರೆ ಎರಡನೆಯ ಯೋಗಿಯು ಇನ್ನೂ ವಿಚಾರದ ಹಂತ ದಲ್ಲಿಯೇ ಇದ್ದಾನೆ, ತಾರ್ಕಿಕ ಮನಸ್ಸನ್ನು (Logical mind) ಇನ್ನೂ ಮೀರಿ ಹೋಗಿಲ್ಲ. ಸತ್ಯವು ತರ್ಕಕ್ಕೆ ತಲೆಬಾಗಬೇಕಿಲ್ಲ.

ನಮಗೆ ಸತ್ಯದ ಅರಿವಾಗಬೇಕಾದರೆ ಈ ತಾರ್ಕಿಕ ಮನಸ್ಸನ್ನು ಮೀರಿಹೋಗಬೇಕು. ಮನುಷ್ಯನು ಮೊದಲು ಆ ವಿಚಾರವನ್ನು ಬಿಟ್ಟು ವಿಚಾರದ ಹಂತಕ್ಕೆ ಏರಬೇಕು; ಮುಂದೆ ಅದನ್ನು ಮೀರಿ ವಿಚಾರಾತೀತ ಸ್ಥಿತಿಯನ್ನು ಮುಟ್ಟಬೇಕು. (Irrational —> Rational —> Supra-rational).

ಸ್ವಾಮಿ ವಿವೇಕಾನಂದರ ಅಭಿಪ್ರಾಯದಲ್ಲಿ , ನಾವು ನಮ್ಮ ಆಂತರಿಕ ಆದರ್ಶವನ್ನೇ ಹೊರಗೆ ಭಗವದ್ರೂಪದಲ್ಲಿ ಪೂಜಿಸು ತ್ತೇವೆ. ನಾವು ಸರ್ವಶಕ್ತರಾಗಲು ಬಯಸುತ್ತೇವೆ; ಅದಕ್ಕೇ ದೇವರನ್ನು ಸರ್ವಶಕ್ತ ಎನ್ನುತ್ತೇವೆ. ನಾವು ಸರ್ವವನ್ನೂ ತಿಳಿಯ ಬಯಸುತ್ತೇವೆ; ಅದಕ್ಕೇ ದೇವರು ಸರ್ವಜ್ಞನಾಗುತ್ತಾನೆ. ನಾವು ಪ್ರೀತಿಯನ್ನು ಬಯಸುತ್ತೇವೆ; ಅದಕ್ಕೇ ದೇವರನ್ನು ಪ್ರೇಮ ಸ್ವರೂಪಿ ಎಂದು ಪೂಜಿಸುತ್ತೇವೆ. ನಾವು ಸುಖವನ್ನು ಬಯಸು ತ್ತೇವೆ; ಅದಕ್ಕೇ ದೇವರು ಆನಂದಸ್ವರೂಪನಾಗುತ್ತಾನೆ. ಆದ್ದ ರಿಂದ ಭಗವಂತ ನಮ್ಮೊಳಗೇ ಇದ್ದಾನೆ. ಸ್ವಾಮಿ ವಿವೇಕಾನಂದರ ಮಾತಿನಲ್ಲಿ ಹೇಳಬೇಕಂದರೆ:

''ಪ್ರತಿಯೊಂದು ಜೀವಿಯ ಶ್ರೇಷ್ಠತಮ ಆದರ್ಶವನ್ನೇ ದೇವರು ಎನ್ನುವುದು. ದಡ್ಡನಾಗಲೀ. ಬುದ್ಧಿವಂತನಾಗಲಿ, ಯತಿ ಯಾಗಲಿ, ಪಾಪಿಯಾಗಲಿ, ಸ್ತ್ರೀಯಾಗಲಿ, ಪುರುಷನಾಗಲಿ, ಅಕ್ಷರಸ್ಥ ನಾಗಲಿ, ಅನಕ್ಷರಸ್ಥನಾಗಲಿ, ಸುಸಂಸ್ಕೃತನಾಗಿರಲಿ; ಅಸಂಸ್ಕೃತ ನಾಗಿರಲಿ, ಪ್ರತಿಯೊಬ್ಬನಿಗೂ ಶ್ರೇಷ್ಠತಮ ಆದರ್ಶವೇ ದೇವರು. ಸೌಂದರ್ಯ, ಭವ್ಯತೆ, ಶಕ್ತಿ, ಆದರ್ಶಗಳ ಪರಾಕಾಷ್ಠೆ ಎಲ್ಲಿ ಒಂದೆಡೆ ಸೇರಿದೆಯೋ ಅದೇ ನಮ್ಮನ್ನು ಪ್ರೀತಿಸುವ ಮತ್ತು ನಾವು ಪ್ರೀತಿಸುವುದಕ್ಕೆ ಯೋಗ್ಯವಾದ ದೇವರ ಪರಿಪೂರ್ಣ ಭಾವನೆ.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೧, ಪು.೨೪೯)*

### ಬರಿಯ ಉಪನ್ಯಾಸದಿಂದ ಪ್ರಯೋಜನವಿಲ್ಲ

**ಶ್ರೀರಾಮಕೃಷ್ಣರು:** ''ವಿವೇಕ-ವೈರಾಗ್ಯ ಗಳಿಸಿಕೊಳ್ಳದೆ, ಪಾಂಡಿತ್ಯ ಗಳಿಸಿಕೊಂಡರೆ, ಉಪನ್ಯಾಸ ಕೊಟ್ಟರೆ ಏನು ಪ್ರಯೋ ಜನ? ಭಗವಂತನೊಬ್ಬನೇ ಸತ್ಯ; ಉಳಿದುದೆಲ್ಲ ಅಸತ್ಯ; ಆತ ನೊಬ್ಬನೇ ವಸ್ತು; ಉಳಿದುದೆಲ್ಲ ಅವಸ್ತು. ಇದಕ್ಕೆ ವಿವೇಕ ಅಂತ ಹೆಸರು.''

ಭಗವದ್ವಸ್ತುವನ್ನು ಅನುಭವಿಸಬೇಕು. ಅದರ ಬದಲು ನಾವು ಆ ವಿಷಯದ ಬಗ್ಗೆ ವಾಗ್ವೈಖರಿಯನ್ನು ಮೆರೆದು ಹೆಸರು ಕೀರ್ತಿ ಯನ್ನು ಅನುಭವಿಸುತ್ತೇವೆ. ಅನುಭವಿಸಬೇಕಾದ ವಸ್ತುವನ್ನು ಮಾತಿನ ವಸ್ತುವಾಗಿ ಉಪಯೋಗಿಸುತ್ತಿದ್ದೇವೆ. ಒಂದು ಹಾಸ್ಯ ಪ್ರಸಂಗ ನೆನಪಿಗೆ ಬರುತ್ತದೆ. ಒಂದು ಗ್ರಂಥಾಲಯ. ಅದರಲ್ಲಿ ಮಕ್ಕಳಿಗಾಗಿ ಒಂದು ಪ್ರತ್ಯೇಕ ವಿಭಾಗವಿತ್ತು; ಅಲ್ಲಿ ಮಕ್ಕಳ ಪುಸ್ತಕ ಗಳನ್ನು ಸಂಗ್ರಹಿಸಿಡಲಾಗಿತ್ತು. ಒಂದು ಹೆಣ್ಣು ಮಗು ಪ್ರತಿದಿನ ವಿಶ್ವಕೋಶದ ಒಂದು ಸಂಪುಟವನ್ನು ತೆಗೆದುಕೊಂಡು ಮಕ್ಕಳ ವಿಭಾಗಕ್ಕೆ ಹೋಗುತ್ತಿತ್ತು. ಗ್ರಂಥಾಲಯವನ್ನು ನೋಡಿಕೊಳ್ಳು ವವನಿಗೆ ಇದೊಂದು ಆಶ್ಚರ್ಯ: ಈ ಮಗು ವಿಶ್ವಕೋಶವನ್ನು ಓದುವುದೇ! ಒಂದು ದಿನ ಮಗುವಿನ ಹಿಂದೆಯೇ ಹೋದನು. ಆ ಮಗು ವಿಶ್ವಕೋಶದ ಸಂಪುಟವನ್ನು ಕುರ್ಚಿಮೇಲಿರಿಸಿ, ಅದರ ಮೇಲೆ ಕುಳಿತುಕೊಂಡು ಮಕ್ಕಳ ಪುಸ್ತಕವನ್ನು ಓದಲು ಪ್ರಾರಂಭಿ ಸಿತು. ಕಾರಣ ಕುರ್ಚಿಯ ಎತ್ತರ ಕಡಿಮೆ ಇದ್ದುದ್ದರಿಂದ, ಮೇಜಿನ ಮೇಲೆ ಪುಸ್ತಕ ಇರಿಸಿ ಓದುವುದಕ್ಕೆ ಅದಕ್ಕೆ ಕಷ್ಟವಾಗುತ್ತಿತ್ತು. ಆ ಮಗುವಿಗೆ ವಿಶ್ವ ಕೋಶದ ಬೆಲೆ ಅಷ್ಟೇ . ಆ ಮಗುವು ಅಧ್ಯಯನ ಯೋಗ್ಯವಾದ ಪುಸ್ತಕವನ್ನು ಕುಳಿತುಕೊಳ್ಳುವ ವಸ್ತುವಾಗಿ ಉಪ ಯೋಗಿಸಿತು. ನಾವೂ ಕೂಡ ಅನುಭವಯೋಗ್ಯವಾದ ವಸ್ತು ವನ್ನು ಮಾತಿನ ವಸ್ತುವನ್ನಾಗಿ ಉಪಯೋಗಿಸುತ್ತೇವೆ.

*(ಮುಂದುವರಿಯುವುದು)*

**ಗೋಪಾಲ ಇತಿ ಮತ್ವಾ ತ್ವಾಂ ಪ್ರಚುರಕ್ಷೀರವಾಂಛಯಾ ।**
**ಶ್ರಿತೋ ಮಾತುಃ ಸ್ತನಕ್ಷೀರಮಪಿ ಲಬ್ಧುಂ ನ ಶಕ್ನುಯಾಮ್ ॥**

ನೀನು ಗೋಪಾಲನೆಂದು ತಿಳಿದು ಸಮೃದ್ಧಿಯಾಗಿ ಹಾಲು ಕುಡಿಯಬಹುದೆಂಬ ಆಸೆಯಿಂದ ನಿನ್ನನ್ನು ಆಶ್ರಯಿಸಿದೆ. ಆದರೆ ತಾಯಿಯ ಎದೆ ಹಾಲನ್ನೂ ನಾನು ಕುಡಿಯುವುದು ಅಸಂಭವವಾಯಿತು! (ಮೋಕ್ಷ ದೊರಕಿ, ಪುನರ್ಜನ್ಮವಿಲ್ಲ.)

*– ಸಮಯೋಚಿತಪದ್ಯಮಾಲಿಕಾ*